ಸ್ವಾಮಿ ಶುದ್ಧಾನಂದಜಿ ಯಾವಾಗಲೂ ಹೇಳುತ್ತಿದ್ದರು, "ನೋಡಿ, ಸ್ವಾಮಿ ವಿವೇಕಾನಂದರ ಕೃಪೆಯಿಂದ ನಾನು ಇಷ್ಟು ಅರಿತಿದ್ದೇನೆ– ನಮ್ಮೆಲ್ಲ ಕಾರ್ಯಕಲಾಪಗಳೂ, ಅದು ಪರಿಹಾರ ಕಾರ್ಯವಾಗಿರಲಿ, ಶಾಲಾಕಾಲೇಜುಗಳನ್ನು ನಡೆಸುವುದಾಗಲಿ, ಆಸ್ಪತ್ರೆ ನಡೆಸುವುದಾಗಲಿ, ಅಥವಾ ಭಾಷಣ ಮಾಡುವುದಾಗಲಿ – ಎಲ್ಲವೂ ಭಗವಂತನ ಉಪಾಸನೆಯೇ ಆಗಿದೆ. ಅವುಗಳೆಲ್ಲವೂ ಶ್ರೀರಾಮಕೃಷ್ಣರ ಮಹಿಮಾ ಪ್ರಚಾರಕ್ಕಾಗಿ ಮಾತ್ರ."

### ಸ್ವಾಮಿ ವಿರಜಾನಂದಜಿ ಮಹಾರಾಜ್



ಸ್ವಾಮಿ ವಿರಜಾನಂದರ ಪೂರ್ವಾಶ್ರಮದ ಹೆಸರು ಕಾಲಿ ಕೃಷ್ಣ ಎಂದು. ಅವರ ಮನಸ್ಸು ಚಿಕ್ಕ ವಯಸ್ಸಿನಲ್ಲಿಯೇ ಭಗವನ್ಮುಖಿವಾಗಿತ್ತು. ಶ್ರೀರಾಮಕೃಷ್ಣರ ಸಾಕ್ಷಾತ್ ಶಿಷ್ಯರ ನಂತರ ವರಾಹ ನಗರದ ಮಠಕ್ಕೆ ಬಂದು ನೆಲೆಸಿದವರಲ್ಲಿ ಅವರೇ ಮೊದಲಿಗರು.

ವರಾಹನಗರದ ಮಠದಲ್ಲಿ ಅವರು ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರ ಪ್ರೀತಿಯ ಸಹವಾಸವನ್ನು ಹೊಂದಿದರು. ಅವರೆಲ್ಲರ ಸೇವೆಯನ್ನೂ ಮಾಡುತ್ತಿದ್ದರು. ಅವರ ನಿಷ್ಠೆಯನ್ನು ಕಂಡು, ಸ್ವಾಮಿ ಶಾರದಾನಂದಜಿ ಹೀಗೆ ಉದ್ಗರಿಸಿದರಂತೆ: "ಯಾರಪ್ಪಾ ಈ ಬಾಲಕ? ಎಲ್ಲರ ಸೇವೆಯನ್ನೂ ತಾಯಿಯಂತೆ ಮಾಡುತ್ತಿದ್ದಾನೆ."

ಶ್ರೀಮಾತೆ ಶಾರದಾದೇವಿಯರ ಶಿಷ್ಯರಾದ ಅವರು ಸ್ವಾಮಿ ವಿವೇಕಾನಂದರಿಂದ ೧೮೯೭ ರಲ್ಲಿ ಸಂನ್ಯಾಸ ದೀಕ್ಷೆಯನ್ನು ಪಡೆದುಕೊಂಡರು. ವೈರಾಗ್ಯಸಂಪನ್ನರಾಗಿದ್ದ ಇವರು ಯಾವಾಗಲೂ ಸಾಧನೆ–ಭಜನೆಗಳಲ್ಲಿ ಮಗ್ನರಾಗಿರುತ್ತಿದ್ದರು.

೧೮೯೭ ರಲ್ಲಿ ಸ್ವಾಮಿ ವಿವೇಕಾನಂದರು ವಿರಜಾನಂದರನ್ನು ಪ್ರಚಾರಕ್ಕಾಗಿ ಢಾಕಾ ನಗರಕ್ಕೆ ಕಳಿಸುವಾಗ, ಈ ಮಾತನ್ನು ಹೇಳುತ್ತಾರೆ, "ವಿಶ್ವಾಸವಿಡು. ಶ್ರೀರಾಮಕೃಷ್ಣರ ಶಕ್ತಿ ನಿನ್ನಲ್ಲಿ ಕೆಲಸ ಮಾಡುತ್ತದೆ. ತಿಳಿದುಕೋ, ಈ ಸಂಘವೆಂದರೆ ಶ್ರೀರಾಮಕೃಷ್ಣರ ಸಮಷ್ಟಿ ಶರೀರವಲ್ಲದೆ ಬೇರಲ್ಲ."

ಸ್ವಾಮಿಗಳು ಮಾಯಾವತಿಯ ಅದ್ವೈತ ಆಶ್ರಮದಲ್ಲಿ ಬಹಳ ಕಾಲ ಸೇವೆ ಸಲ್ಲಿಸಿ, ಶ್ಯಾಮಲಾತಲ ಎಂಬಲ್ಲಿ ಒಂದು ನೂತನ ಆಶ್ರಮವನ್ನು ಸ್ಥಾಪಿಸಿದರು. ೧೯೩೮ ರಲ್ಲಿ ಸಂಘಗುರುವಾದ ಅವರು ಸುಮಾರು ೧೨ ವರ್ಷಗಳ ಕಾಲ ಸಾವಿರಾರು ಮುಮುಕ್ಷುಗಳಿಗೆ ಸಾಧನೆಯ ದ್ವಾರವನ್ನು ತೆರೆದಿಟ್ಟರು. ಅಷ್ಟು ದೊಡ್ಡ ಪದವಿಯಲ್ಲಿ ಇದ್ದರೂ ಸಣ್ಣಪುಟ್ಟ ವಿಷಯಗಳಿಗೂ ಗಮನ ಕೊಡುತ್ತಿದ್ದರು. ಅವರ ಹೃದಯದ ಬಾಗಿಲು ಸದಾ ಎಲ್ಲರಿಗೂ ತೆರೆದಿರುತ್ತಿತ್ತು.

ಒಬ್ಬ ಭಕ್ತ ಸ್ವಾಮಿಗಳಿಂದ ದೀಕ್ಷೆ ಪಡೆದು ಮನೆಯಲ್ಲಿಯೇ ಶ್ರೀರಾಮಕೃಷ್ಣರ ಉಪಾಸನೆಯನ್ನು ಮಾಡಲು ಆರಂಭಿಸಿದನು. ಬ್ರಾಹ್ಮ ಸಮಾಜದ ಅನುಯಾಯಿಯಾಗಿದ್ದ ಆತನ ಪತ್ನಿ ಇದರಿಂದಾಗಿ ಮನೆಯಲ್ಲಿ ಅಶಾಂತಿಯ ವಾತಾವರಣವನ್ನು ಉಂಟುಮಾಡಿದ್ದಳು. ಇದನ್ನು ಅರಿತ ಸ್ವಾಮಿ ವಿರಜಾನಂದರು, ಇನ್ನೊಬ್ಬ ಸಂನ್ಯಾಸಿಗಳ ಜೊತೆಗೆ ತಾವೇ ಆ ಭಕ್ತನ ಮನೆಗೆ ಬಂದರು. ಪತ್ನಿಯೇ ಬಾಗಿಲು ತೆಗೆದಳು; ತನ್ನ ಪತಿಯ ಗುರುವನ್ನು ಸ್ವಲ್ಪ ಕಾಲ ದಿಟ್ಟಿಸಿ ನೋಡಿ, ಇದ್ದಕ್ಕಿದ್ದಂತೆ, ಅವರ ಕಾಲುಗಳನ್ನು ಹಿಡಿದುಕೊಂಡು, ರೋದಿಸಲಾರಂಭಿಸಿದಳು. ಅದಲ್ಲದೆ ಹೀಗೆ ಪ್ರಾರ್ಥಿಸಿದಳು, "ಮಹಾರಾಜ್, ನನ್ನನ್ನು ಆಶೀರ್ವದಿಸಿ, ನನಗೆ ಶಾಂತಿಯನ್ನು ನೀಡಿ." ಸ್ವಾಮಿಗಳು ಅವಳನ್ನು ತುಂಬು ಹೃದಯದಿಂದ ಆಶೀರ್ವದಿಸಿದರು, ಹೀಗೆ ಆ ಮನೆಯಲ್ಲಿ ಶಾಂತಿ ಸ್ಥಾಪಿಸಿದರು. ಸ್ವಾಮಿ ವಿರಜಾನಂದಜಿ ಅವರು ಇಂತಹ ದಿವ್ಯಶಕ್ತಿ ಸಂಪನ್ನರಾಗಿದ್ದರು.

(ಮುಂದುವರಿಯುವುದು)

## ಸ್ನೇಹಪ್ರಭ

### ಕೀಳರಿಮೆಯನ್ನು ಹೋಗಲಾಡಿಸಿಕೊಳ್ಳುವುದು ಹೇಗೆ?

**ಕೀಳರಿಮೆಗೆ** ಎರಡು ಮುಖ್ಯ ಕಾರಣಗಳಿವೆ – ಒಂದು ವಾತಾವರಣಕ್ಕೆ ಸಂಬಂಧಪಟ್ಟುದು (environmental). ಮತ್ತೊಂದು ವೈಯಕ್ತಿಕವಾದುದು (individual); ತಂದೆತಾಯಿಗಳು ಮತ್ತು ಇತರರು ಮಕ್ಕಳನ್ನು ಕೀಳಾಗಿ ಕಾಣುವುದರಿಂದ, ಅವರ ಶಕ್ತಿಸಾಮರ್ಥ್ಯಗಳನ್ನು ಗುರುತಿಸದೇ, ಉತ್ತೇಜನ ಕೊಡದೇ ಇರುವುದರಿಂದ, 'ನೀನು ದಡ್ಡ, ಕೆಲಸಕ್ಕೆ ಬಾರದವನು' ಎಂದು ಆಗಾಗ ಬೈಯುತ್ತಿರುವುದರಿಂದ ಅದಕ್ಕೆ ಅನುಗುಣವಾದ ಸ್ವವ್ಯಕ್ತಿತ್ವ ಚಿತ್ರವನ್ನು ಮಕ್ಕಳು ಬೆಳೆಸಿಕೊಳ್ಳುತ್ತಾರೆ. ಇದೇ ವೈಯಕ್ತಿಕ ಕೀಳರಿಮೆಗೆ ಕಾರಣವಾಗುತ್ತದೆ. ದಬ್ಬಾಳಿಕೆ ಪ್ರವೃತ್ತಿಯ ತಂದೆತಾಯಿಗಳು ಮಕ್ಕಳಲ್ಲಿ ಕೀಳರಿಮೆಯನ್ನು ಬೆಳೆಸುತ್ತಾರೆ. ಶಾಲೆಯ ಶಿಕ್ಷಕರು ಮಕ್ಕಳನ್ನು ನಡೆಸಿಕೊಳ್ಳುವ ರೀತಿಯೂ ಕೀಳರಿಮೆಗೆ ಕಾರಣವಾಗುತ್ತದೆ. ಇದು ವಾತಾವರಣಕ್ಕೆ ಸಂಬಂಧಿಸಿದ ಕಾರಣ.

ಒಬ್ಬ ವ್ಯಕ್ತಿಯು ಅನೇಕ ರಂಗಗಳಲ್ಲಿ ಸೋಲನ್ನು ಅನುಭವಿಸಿದಾಗಲೂ ತಾನು ಯಾತಕ್ಕೂ ಬಾರದವನೆಂಬ ಕೀಳರಿಮೆಯನ್ನು ಬೆಳೆಸಿಕೊಳ್ಳುತ್ತಾನೆ. ಆಧ್ಯಾತ್ಮಿಕ ಪ್ರವೃತ್ತಿವುಳ್ಳ ಕೆಲವರು ತಮ್ಮ ಹಲವು ಆಸೆಗಳನ್ನು, ವಿಶೇಷವಾಗಿ ಕಾಮವನ್ನು, ನಿಗ್ರಹಿಸಲಾರದೆ ಕೀಳರಿಮೆಯನ್ನು ಬೆಳೆಸಿಕೊಳ್ಳುತ್ತಾರೆ. ತಮ್ಮ ಸಾಮರ್ಥ್ಯಕ್ಕಿಂತ ಅಧಿಕವಾದ ಮಹತ್ವಾಕಾಂಕ್ಷೆ ಉಳ್ಳವರು, ತಮ್ಮ ಆಸೆಗಳನ್ನು ಪೂರ್ತಿಗೊಳಿಸಲಾಗದೆ ಕೀಳರಿಮೆಗೆ ಬಲಿಯಾಗುತ್ತಾರೆ.

**ಕೀಳರಿಮೆಗೆ ರಾಮಬಾಣವೆಂದರೆ ಆತ್ಮವಿಶ್ವಾಸ**. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "...ನಿಜವಾದ ಆತ್ಮಶ್ರದ್ಧೆಯನ್ನು ನಮ್ಮಲ್ಲಿ ಉಜ್ಜೀವನಗೊಳಿಸಬೇಕಾಗಿದೆ. ಆತ್ಮಶ್ರದ್ಧೆಯ ಹಣತೆಯನ್ನು ಹಚ್ಚಬೇಕಾಗಿದೆ." **"ನಾನು ದೇಹವಲ್ಲ, ಮನಸ್ಸಲ್ಲ, ನಾನು ಪವಿತ್ರಾತ್ಮ, ದಿವ್ಯಾತ್ಮ"** ಎಂದು ಮುಂತಾಗಿ ತನ್ನ ನೈಜ ಸ್ವರೂಪದ ಬಗ್ಗೆ ಚಿಂತಿಸಬೇಕು. ತನ್ನ ಬಗ್ಗೆ ಉದಾತ್ತ ಭಾವನೆಯನ್ನು ಬೆಳೆಸಿಕೊಂಡಾಗ ಕೀಳರಿಮೆ ಸ್ವಾಭಾವಿಕವಾಗಿಯೇ ಹೊರಟುಹೋಗುತ್ತದೆ. ಪರಿಸರದ ಒತ್ತಡ ಏನೇ ಇದ್ದರೂ ನಮ್ಮ ಆತ್ಮ ಬಲವನ್ನು ಮೆರೆಯಬೇಕು, ಸೋಲಿಗೆ ಮಣಿಯಬಾರದು. ಸಣ್ಣ ಸಣ್ಣ ಕಾರ್ಯಗಳಲ್ಲಿ ಯಶಸ್ಸನ್ನು ಸಾಧಿಸುತ್ತ ಹೆಚ್ಚು ಹೆಚ್ಚು ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಬೇಕು. ಆಗ ಕೀಳರಿಮೆ ಕಡಮೆಯಾಗುತ್ತದೆ.

(ಬರಹ: ಸ್ವಾಮಿ ನಿತ್ಯಸ್ಥಾನಂದ)